೧–೦೦ ಪಿ. ಎಂ.

ಅಧ್ಯಕ್ಷರು.—ಶ್ರೀ ಬಿ. ಎಂ. ಇದಿನಬ್ಬ	ಗೈರು ಹಾಜರು
ಶ್ರೀ ಗೋಪಾಲ ಪುಕಂದ ಕಾನಡೆ	,,
ಶ್ರೀಮತಿ ಮನೋರಮ ಮಧ್ವರಾಜ್	,,
ಶ್ರೀ ಬಿ. ಲಕ್ಕಪ್ಪ	,,
ಶ್ರೀ ಬಸವರಾಜ್	,,
ಶ್ರೀ ಡಿ.ಎ. ಚಿನ್ನಪ್ಪ	,,
ಶ್ರೀ ಸಿ.ಎಂ. ಉದಾಸಿ	,,

ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ವಿಷಯವನ್ನು ಓದಿ.

9. ಶಿಕಾರಿಪುರ ನಗರದಲ್ಲಿ ಹರಿಜನ-ಗಿರಿಜನ ಹಾಸ್ಟಲ್ ಕಟ್ಟಡದ ಗೋಡೆಗಳು ಶಿಥಿಲಗೊಂಡಿರುವುದರಿಂದ ತರ್ತು ದುರಸ್ತಿ ಮಾಡುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— "ಜಿಲ್ಲಾ ಪರಿಷತ್ ಆಸ್ತಿತ್ವಕ್ಕೆ ಬಂದಮೇಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಶಿಕಾರಿಪುರ ನಗರದಲ್ಲಿ ಹರಿಜನ ಗಿರಿಜನ ಹಾಸ್ಟಲ್ ಮತ್ತಿಕೋಟೆ ಗ್ರಾಮದ ಫ್ರೀಮೆಟ್ರಿಕ್ ಹಾಸ್ಟಲ್ ಮತ್ತು ಹಿತ್ಲಗ್ರಾಮದ ಫ್ರೀಮೆಟ್ರಿಕ್ ಹಾಸ್ಟಲ್ ಕಟ್ಟಿದ್ದು, ಇವುಗಳಲ್ಲಿ ನಾಯಿ ನರಿಗಳು ವಾಸಮಾಡುತ್ತಿದ್ದು, ಶಿಥಿಲಗೊಳ್ಳುತ್ತಿದ್ದು ಸರ್ಕಾರದಿಂದ ಸಾಕಷ್ಟು ಹಣ ಬಿಡುಗಡೆ ಮಾಡಿದ್ದರು ಕಳೆದ ೬ ತಿಂಗಳಿಂದ ಜಿಲ್ಲಾಪರಿಷತ್ ಎಂಜಿನಿಯರ್ ವಿಭಾಗದವರು ಕೆಲಸ ಪ್ರಾರಂಭಿಸದಿರಲು ಕಾರಣವೇನು? ಬಜೆಟ್‌ನಲ್ಲಿ ಮಂಜೂರಾಗಿರುವ ಸಂಪೂರ್ಣ ಹಣವನ್ನು ಸಿ–ಸಿ–ರಿರವರ ಒಳಗೆ ಉಪಯೋಗಿಸಿಕೊಂಡು ಕಟ್ಟಡದ ಕೆಲಸ ಪೂರ್ಣ ಮಾಡಲು ಸರ್ಕಾರ ಆದೇಶ ನೀಡುವುದೇ ಎಂಬ ವಿಷಯದ ಬಗ್ಗೆ ಸರ್ಕಾರವು ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಜಿ. ಬಸವಣೆಪ್ಪ.— ಮಾನ್ಯ ಸದಸ್ಯರು ಶಿಕಾರಿಪುರ ಟೌನ್‌ನಲ್ಲಿರುವ ಹರಿಜನ ಗಿರಿಜನ ವಿದ್ಯಾರ್ಥಿ ನಿಲಯದ ಕೆಲಸ ಮುಗಿಯುತ್ತಾ ಬಂದಿದ್ದು ಅಪೂರ್ಣವಾಗಿ, ೬ ತಿಂಗಳಿಂದ ಯಾವ ಕೆಲಸವೂ ನಡೆಯದೇ ಸ್ಥಗಿತಗೊಂಡಿದೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸೂಕ್ತ ಪರಿಶೀಲನೆ ಮಾಡಿ ಅದಷ್ಟು ಜಾಗ್ರತೆ ಮುಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೂ ಒಂದೆರಡು ಫ್ರೀಮೆಟ್ರಿಕ್ ಹಾಸ್ಟಲ್‌ಗಳ ಬಗ್ಗೆಯೂ ಸದಸ್ಯರು ಹೇಳಿದ್ದಾರೆ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ, ಅವರೊಂದಿಗೆ ಚರ್ಚೆ ಮಾಡಿ ಸೂಕ್ತ ಕ್ರಮವನ್ನು ಆ ಬಗ್ಗೆ ದೆಗೆದುಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.— ಈಗ ಶ್ರೀ ರಮೇಶ್‌ಕುಮಾರ್‌ರವರು ನಿನ್ನೆಯಂದಿವಸ ಪ್ರಾರಂಭಿಸಿದ್ದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದುವರಿಸುವುದು.

ಶ್ರೀ ರಮೇಶ್ ಕುಮಾರ್.— ಸನ್ಮಾನ್ಯ ಅಧ್ಯಕ್ಷರೇ

ಶ್ರೀ ಬಿ.ಎಸ್. ಯಡಿಯೂರಪ್ಪ.— ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಸದನದಲ್ಲಿ ಮಾತನಾಡುವಾಗ ನಾವು ಈ ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನು ಸದನದ ಮುಂದಿಡಬೇಕಾದ ಸಂದರ್ಭ ಇರುತ್ತದೆ. ಆದುದರಿಂದ ದಯವಿಟ್ಟು ವಿರೋಧಪಕ್ಷದವರನ್ನು ಕರೆಯಿಸಿ ಈ ಸಂದಿಗ್ಧ ಪರಿಸ್ಥಿತಿಯನ್ನು ಬಗೆ ಹರಿಸಬೇಕೆಂದು ವಿನಂತಿಸುತ್ತೇನೆ.